**<u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>**

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ 3

ಸಿ. ಡಬ್ಲ್ಯೂಃ 3

ಸಾಕ್ಷಿದಾರರ ಹೆಸರು : ಮೋಹನ್ ಶಾಂಭಾ ನಾಯ್ಕ

ತಂದೆಯ ಹೆಸರು : ಶಾಂಭಾ ನಾಯ್ಕ

ವಯಸ್ಸು : 57 ವರ್ಷ

ಉದ್ಯೋಗ : ದಿನಗೂಲಿ ಕೆಲಸ

ವಾಸ : ನವಗದ್ದೆ, ತಾಃ ಅಂಕೋಲಾ

ದಿನಾಂಕಃ 15-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಎ.ಪಿ.ಪಿ. ರವರಿಂದಃ

1. ದಿನಾಂಕ 14-08-2020 ರಂದು 2.00 ಘಂಟೆಗೆ ಫೋನ್ ಮೂಲಕ ಚಾಸಾ-1 ರವರು ನನ್ನನ್ನು ಕರೆಸಿದರು. ನಾಗೇಂದ್ರ ಕನ್ನೆಯ್ಯ ಗೌಡರು ಕಡವೆ ಹೊಡೆದಿದ್ದಾರೆ ಅವರ ಮನೆ ತೋರಿಸಲು ಬರಬೇಕು ಎಂದು ನನಗೆ ಅವರು ಹೇಳಿದರು. ಆಮೇಲೆ ಜೀಪಿನಲ್ಲಿ ನವಗದ್ದೆಗೆ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಚಾಸಾ-1, 2 ಮತ್ತು 5 ರಿಂದ 7 ರವರು ಹೋದೆವು. ಸದ್ರಿ ನಾಗೇಂದ್ರರ ಮನೆಗೆ ಹೋಗುವ ಕಾಲುದಾರಿಗಿಂತ 50 ಮೀಟರ್ ದೂರದಲ್ಲಿ ಜೀಪನ್ನು ನಿಲ್ಲಿಸಿದರು. ಅವರ ಮನೆಗೆ ಹೋಗುವ ಕಾಲುದಾರಿಯಲ್ಲಿ ಒಂದು ಬೈಕು ಕಂಡಿತು. ನಂತರ 10 ನಿಮಿಷ ಆದ ಮೇಲೆ ಇಬ್ಬರು ಅಪರಿಚಿತರು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಏನೋ ಹಿಡಿದುಕೊಂಡು ಬರುತ್ತಿರುವುದು ಕಂಡಿತು. ಆಗ ಅವರು ಜೀಪಿನಿಂದ ಕೆಳಗೆ ಇಳಿದು ನಿಂತಿದ್ದ ಇಬ್ಬರು ಸಿಬ್ಬಂದಿಗಳನ್ನು ನೋಡಿ, ಆ ಇಬ್ಬರು ಓಡಲು

ಪ್ರಾರಂಭಿಸಿದರು. ಅವರನ್ನು ಸಿಬ್ಬಂದಿಗಳು ಬೆನ್ನಟ್ಟಿದಾಗ ಆ ಚೀಲವನ್ನು ಅಲ್ಲೆ ಬಿಟ್ಟು ಓಡಿ ಹೋದರು. ಸಿಬ್ಬಂದಿಗಳು ಅವರನ್ನು ಬೆನ್ನಟ್ಟಿ ಹೋಗಿ ಹಿಡಿದುಕೂಂಡು ಬಂದರು.

2. ಆ ಪ್ಲಾಸ್ಟಿಕ್ ಚೀಲವನ್ನು ಏನಿದೆ ಎಂದು ನೋಡಲು ಬಿಚ್ಚಿದರು. ಅದರಲ್ಲಿ ಹಸಿ ಮಾಂಸ ಕಂಡು ಬಂದಿತು. ಅವರಿಬ್ಬರಿಗೆ ಆ ಮಾಂಸ ಯಾವುದರ ಮಾಂಸ ಎಂದು ಹಾಗೂ ಅವರ ಹೆಸರನ್ನು ಕೇಳಿದರು. ಒಬ್ಬರು ಬ್ರಿಜೇಶ್ ಗೋಪಾಲ್ ನಾಯ್ಕ ಹಾಗೂ ಹನುಮ ಜಟ್ಟಿ ಗೌಡ ಎಂದು ತಿಳಿಸಿದರು. ಅವರಿಬ್ಬರು ಕಡವೆ ಮಾಂಸ ಎಂದು ಹೇಳಿದರು. ಅವರು ನಾಗೇಂದ್ರರವರು ಆ ಕಡವೆಯನ್ನು ಹೊಡೆದು ಕೊಂದರು ಹಾಗೂ ಬ್ರಿಜೇಶ್ ನನ್ನು ಮಾಂಸವನ್ನು ರೂ.1,500/-ಕ್ಕೆ ಮಾರಾಟ ಮಾಡಲು ಕರೆಸಿದರು ಹಾಗೂ ಆ ಮಾಂಸವನ್ನು ತರುವಾಗ ಈಗ ಸಿಕ್ಕಿರುವುದು ಎಂದು ಹೇಳಿದರು. ಅವರಿಬ್ಬರಲ್ಲಿದ್ದ ತಲಾ ಒಂದು ಮೊಬೈಲ್ ಫೋನ್ ಅನ್ನು, ಆ ಮಾಂಸವನ್ನು ಹಾಗೂ ಆ ಬೈಕ್ ನಂ. ಕೆಎ-30-3537 ಅನ್ನು ಮಹಜರು ಮಾಡಿ ಜಪ್ತು ಮಾಡಿದರು ಮತ್ತು ಫೋಟೊ ತೆಗೆದಿರುತ್ತಾರೆ. ಮಹಜರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1ಸಿ ಎಂದು ಗುರುತಿಸಲಾಯಿತು. 4 ಫೋಟೊಗಳನ್ನು ಮತ್ತು 1 ಸಿ.ಡಿ.ಯನ್ನು ನೋಡಿ, 2 ಫೂಟೊಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಸಾಬೀತು ಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿಪಿ-2 ಮತ್ತು 5 ಎಂದು ಗುರುತಿಸಲಾಗಿರುತ್ತದೆ. 2 ಮೊಬೈಲ್ ಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮುಮಾ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಸದ್ರಿ ಬ್ರಿಜೇಶ್ ಗೋಪಾಲ್ ನಾಯ್ಕ ಹಾಗೂ ಹನುಮ ಜಟ್ಟಿ ಗೌಡರನ್ನು ನ್ಯಾಯಾಲಯದ ಮುಂದೆ ನೋಡಿ

ಗುರುತಿಸುತ್ತಿದ್ದೇನೆ. ಸದ್ರಿ ಮುದ್ದೆ ಮಾಲು ಹಾಗು ಆರೋಪಿಗಳ ಜೊತೆ ಇಲಾಖಾ ವಾಹನದಲ್ಲಿ ವಲಯ ಕಚೇರಿಗೆ ಬಂದೆವು.

3. ಅದೇ ದಿವಸ ಸಂಜೆ 4.30 ಕ್ಕೆ ನಾಗೇಂದ್ರ ಕನ್ನಯ್ಯ ಗೌಡರ ಮನೆಗೆ ನಾನು ಮತ್ತು ಚಾಸಾ-1, 2, 5 ರಿಂದ 7 ರವರು ಹೋದೆವು. ಹಳ್ಳದ ಬಳಿ ಕಲ್ಲಿನ ಮೇಲೆ ಸದ್ರಿ ನಾಗೇಂದ್ರ ಮಲಗಿದ್ದರು. ನನ್ನಲ್ಲಿ ಸದ್ರಿ ವ್ಯಕ್ತಿಯನ್ನು ತೋರಿಸಿ ನಾಗೆಂದ್ರನಾ ಎಂದು ಕೇಳಿದಾಗ ಹೌದು ಎಂದು ಹೇಳಿರುತ್ತೇನೆ. ಸಿಬ್ಬಂದಿಗಳು ಅವರನ್ನು ಹಿಡಿದುಕೊಂಡರು. ಆಗ ಅವರನ್ನು ವಿಚಾರಿಸಲಾಗಿ ಅವರು ಕಡವೆಯನ್ನು ತಾನೇ ಹೊಡೆದಿರುವುದಾಗಿ ಒಪ್ಪಿಕೊಂಡರು. ಅವರನ್ನು ಎಲ್ಲಿ ಕೊಂದಿರುವುದು ಎಂದು ಕೇಳಿದಾಗ, ಅವರ ಮನಯಿಂದ 100 ಮೀಟರ್ ದೂರದಲ್ಲಿರುವ ಹಳ್ಳದ ಹತ್ತಿರ ಕೊಂದಿರುವುದಾಗಿ ತಿಳಿಸಿದರು. ಆ ಹಳ್ಳದ ಹತ್ತಿರ ಅವರು ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದರು. ಅಲ್ಲಿ ಒಂದು ಕಡೆ ತಲೆ ಭಾಗ ಬಿದ್ದಿತ್ತು. ಇನ್ನೊಂದು ಕಡೆ 4 ಕಾಲುಗಳು ಇತ್ತು. ಚರ್ಮ ಒಂದು ಕಡೆ ರಾಶಿ ಹಾಕಿ ಇಟ್ಟಿದ್ದರು. ಅದೇ ರೀತಿ ಕಡವೆಯ ಹೊಟ್ಟೆಯಲ್ಲಿ ಇದ್ದ ಕರು ರೂಪದ ಭ್ರೂಣ ಇತ್ತು. ಪಶು ವೈದ್ಯಾಧಿಕಾರಿಯನ್ನು ಅಲ್ಲಿಗೆ ಕರೆಸಿದರು. ಮೇಲಾಧಿಕಾರಿಯಾದ ಡಿ.ಎಫ್.ಓ. ರವರು ಬಂದರು. ಆ ಪಶು ವೈದ್ಯಾಧಿಕಾರಿ ಒಂದು ಸ್ಯಾಂಪಲ್ ಅನ್ನು ತೆಗೆದರು. ಅಲ್ಲದೇ ಚೌಕ ಆಕಾರದ ಚರ್ಮದ ಗುಂಡು ಹೋಗಿರುವ ಒಂದು ತುಂಡನ್ನು ಸ್ಯಾಂಪಲ್ ತೆಗೆದರು. ಪಂಚನಾಮೆ ಮಾಡಿ ಫೋಟೊ ತೆಗೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-7 ಸಿ ಎಂದು ಗುರುತಿಸಲಾಯಿತು. ಫೋಟೊಗಳನ್ನು ಮತ್ತು 1 ಸಿ.ಡಿ.ಯನ್ನು ನೋಡಿ, ಸಾಕ್ಷಿ 1 ಫೋಟೊವನ್ನು ಗುರುತಿಸಿದ್ದು, ಅದನ್ನು ಈಗಾಗಲೇ ಸಾಬೀತು ಪಡಿಸುವ

ಜವಾಬ್ದಾರಿಯೊಂದಿಗೆ ನಿಪಿ-8 ಎಂದು ಗುರುತಿಸಲಾಗಿದೆ. ನಂತರ ಸದ್ರಿ ನಾಗೆಂದದ್ರನನ್ನು ಕಚೇರಿಗೆ ಕರೆದುಕೊಂಡು ಬಂದರು. ಸದ್ರಿ ನಾಗೇಂದ್ರ ಕನ್ನೆಯ್ಯ ರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದೇನೆ. ಮಾದರಿ ಚರ್ಮದ ಭಾಗವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮುಮಾ-5 ಎಂದು ಗುರುತಿಸಲಾಗಿದೆ. ಮುಮಾ-5ರ ಪ್ಯಾಕೆಗೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸುತ್ತಿದ್ದು, ಅದನ್ನು ಮುಮಾ-5 ಸಿ ಎಂದು ಗುರುತಿಸಲಾಯಿತು.

4. ದಿನಾಂಕ 17-08-2020 ರಂದು ನ್ಯಾಯಾಲಯದ ಆದೇಶದಂತೆ ವಲಯ ಅರಣ್ಯ ಕಚೇರಿಯ ಬಳಿ ಇರುವ ಎ.ಸಿ.ಎಫ್. ರವರ ವಸತಿಗೃಹದ ಹಿಂದುಗಡೆ ಮಾಂಸಗಳನ್ನು ಬೆಂಕಿ ಹಾಕಿ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.30 ಘಂಟೆಯ ತನಕ ಪಂಚನಾಮೆ ಮಾಡಿ ಸುಡಲಾಯಿತು. ಆ ಸಮಯದಲ್ಲಿ ಫೋಟೊ ತೆಗೆಯಲಾಯಿತು. 5 ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಸಾಬೀತು ಪಡಿಸುವ ಜವಾಬ್ದಾರಿಯೊಂದಿಗೆ ಕ್ರಮವಾಗಿ ನಿಪಿ-21 ರಿಂದ 25 ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ-27 ಫೋಟೊವನ್ನು ನೋಡಿ ನಾಗೇಂದ್ರನಿಂದ ಬಂದೂಕು ಮತ್ತು ಕತ್ತಿಯನ್ನು ಅಮಾನುತು ಪಡಿಸಲಾಗಿದೆ ಎಂದು ನುಡಿಯುತ್ತಾರೆ. ಸದ್ರಿ ಬಂದೂಕು ಮತ್ತು ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುಮಾ-3 ಮತ್ತು 4 ಎಂದು ಗುರುತಿಸಲಾಗಿದೆ. ಮುಮಾ-3ರ ಪ್ಯಾಕೆಗೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸುತ್ತಿದ್ದು, ಅದನ್ನು ಮುಮಾ-3 ಸಿ ಎಂದು ಗುರುತಿಸಲಾಯಿತು.

5. ದಿನಾಂಕ 29-09-2020 ರಂದು ಡಿ.ಆರ್. ಪೊಲೀಸರು ಕಾರವಾರದಿಂದ ವಲಯ ಕಚೇರಿಗೆ ಬಂದಿದ್ದರು. ಆ ಬಂದೂಕಿನಲ್ಲಿ ಲೋಡ್ ಆಗಿದ್ದನ್ನು ಜಾಗ್ರತೆ ಇಂದ ಖಾಲಿ ಮಾಡಿದರು. ಅದರಲ್ಲಿದ 4

ಬಾಲ್ಸ್‌ಗಳನ್ನು ಹಾಗೂ 5 ಗ್ರಾಂ ಮದ್ದನ್ನು ಹೊರ ತೆಗೆದರು. ನಂತರ ಅದರ ಸ್ಯಾಂಪಲ್ ಅನ್ನು ತೆಗೆದು ಬೆಂಗಳೂರಿಗೆ ಕಳುಹಿಸಿದರು. ಅಲ್ಲಿ ಪಂಚನಾಮೆ ಬರೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-26 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ದಿನಾಂಕ 17-08-2020 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಪಂಚನಾಮೆಯನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-20 ಸಿ ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲು ಮಾನ್ಯ ಎ.ಪಿ.ಪಿ. ರವರು ಕೋರಿದ್ದು, ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ. ರವರಿಂದ

6. ದಿನಾಂಕ 14-08-2020 ರಂದು ನಾಗೇಂದ್ರರವರು ಸ್ಥಳ ತೋರಿಸಿದ್ದಾಗ ಬಿ.ಡಿ. ಗೌಡರ ತೋಟದಲ್ಲಿ ಬಂದೂಕನ್ನು ಮತ್ತು ಕತ್ತಿಯನ್ನು ಅಮಾನತು ಪಡಿಸಿರುವುದು ಎಂದರೆ ಸರಿ. ನಿಪಿ-9 ರಿಂದ 13 ಕೂಡ ಆ ಸಂದರ್ಭದಲ್ಲಿ ತೆಗೆದು ಫೋಟೋಗಳು ಎಂದರೆ ಸರಿ. ನಿಪಿ-20 ಅನ್ನು ಮಾಂಸಗಳ ಮತ್ತು ಇತರ ಭಾಗವನ್ನು ಸುಡುವಾಗ ಮಾಡಿದ ಪಂಚನಾಮೆ ಎಂದರೆ ಸರಿ.

ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಪಿ.ಡಬ್ಲ್ಯೂಃ 3

ಸಿ. ಡಬ್ಲ್ಯೂಃ 3

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.